

## ಕಾಂಬಿನೇಷನ್ ಒಪ್ಪವಾಗಿರಲಿ

ಚಳಿಗಾಲ ಬಂದಾಗ ಲೇಯರ್ ಆಯ್ಕೆ ಅನಿವಾರ್ಯ. ಆದರೆ ಕಾಂಬಿನೇಷನ್ ಸೂಕ್ತವಾಗಿದ್ದರೆ ಲೇಯರ್‌ನಲ್ಲೂ ದಿನಕ್ಕೊಂದು ಟ್ರೆಂಡ್ ಸೆಟ್ ಮಾಡಬಹುದು. ಗಾಢ ಬಣ್ಣಕ್ಕೂ ಚಳಿಗಾಲಕ್ಕೂ ಸಂಬಂಧವಿದೆ. ಆದರೆ ಮೇಲಿನಿಂದ ಕೆಳಗಿನವರಿಗೂ ಗಾಢಬಣ್ಣಗಳೇ ಬೇಡ. ಲೆಗ್ಗಿಂಗ್ ಅಥವಾ ಪ್ಯಾಂಟ್ ತುಸು ಗಾಢ ಬಣ್ಣದ್ದಾಗಿರಲಿ, ಟಾಪ್ ತುಸು ತಿಳಿ ಬಣ್ಣವಿರಲಿ. ಕೋಟ್ ಅಥವಾ ಜಾಕೆಟ್ ಮತ್ತೆ ಗಾಢ ಬಣ್ಣದ್ದಾಗಿರಲಿ ಎನ್ನುತ್ತಾರೆ ಫ್ಯಾಷನ್ ಡಿಸೈನರ್ ನಿಖಿತಾ ಗೌಡ

ಅಲ್ಲದೆ ಜಂಪ್‌ಸೂಟ್ ಈ ಚಳಿಗಾಲದ ವಿಶೇಷತೆ. ಚಳಿಗಾಲಕ್ಕೆಂದೇ ಉಲನ್, ಟ್ವಿಲ್ ಫ್ಯಾಬ್ರಿಕ್ ಜಂಪ್‌ಸೂಟ್‌ಗಳು ಮಾರುಕಟ್ಟೆಗೆ ಬಂದಿದೆ. ಹೆಚ್ಚು ವೃತ್ತಿಪರ ನೋಟಕ್ಕಾಗಿ ಜಂಪ್‌ಸೂಟ್ ಮೇಲೆ ಬ್ಲೇಜರ್ ಅನ್ನು ಧರಿಸಬಹುದು. ಸೊಗಸಾದ ನೋಟಕ್ಕಾಗಿ ಉದ್ದವಾದ ಕೇಪ್ ಅನ್ನೂ ಸಹ ಜಂಪ್‌ಸೂಟ್ ಜೊತೆಗೆ ಪ್ರಯತ್ನಿಸಬಹುದು ಎನ್ನುತ್ತಾರೆ ಅವರು.

### ಮೂರನೇ ಲೇಯರ್

ಟಾಪ್ ಆಧರಿಸಿ ಮೇಲೆ ಕೋಟ್ ಆಯ್ದುಕೊಳ್ಳಿ. ಉದ್ದ ತೋಳಿನ ಟೀ ಶರ್ಟ್ ಆದಲ್ಲಿ ಅದರ ಮೇಲೆ ಅರ್ಧ ತೋಳಿನ ಶರ್ಟ್ ಹಾಕಿ ನಂತರ ಅದಕ್ಕೂ ತುಸು ಗಿಡ್ಡವಾದ ಜೀನ್ಸ್ ಜಾಕೆಟ್ ಹಾಕಿಕೊಳ್ಳಬಹುದು. ಆದರೆ ಮೇಲಿನ ಜಾಕೆಟ್ ಅಥವಾ ಕೋಟ್ ಒಳಗಿನ ಟೀಶರ್ಟ್, ಶರ್ಟ್ ಅಥವಾ ಟಾಪ್‌ಗಳನ್ನು ಮುಚ್ಚದಿರಲಿ. ಇದು ಈಗಿನ ಸೂಪರ್ ಟ್ರೆಂಡ್.

ಲೇಯರ್ ದಿರಿಸಿನ ಅಂದ ಅಡಗಿರುವುದು ಸರಿಯಾದ ಫ್ಯಾಬ್ರಿಕ್, ಸೂಕ್ತ ಬಣ್ಣ ಹಾಗೂ ಉದ್ದವನ್ನು ಸರಿಯಾದ ಕ್ರಮದಲ್ಲಿ ಜೋಡಿಸುವುದರಲ್ಲಿ. ನೀವು ಎಷ್ಟೇ ಲೇಯರ್ ಮಾಡಿದರೂ ಪ್ರತಿಯೊಂದು ದಿರಿಸೂ ಬೇರೆ ಬೇರೆ ಫ್ಯಾಬ್ರಿಕ್ ಮತ್ತು ಬೇರೆ ಬೇರೆ ಬಣ್ಣದ್ದಾಗಿರುವಂತೆ ನೋಡಿಕೊಳ್ಳಿ. ಆದರೆ ಬಣ್ಣಗಳು ಒಂದರ ಜೊತೆಗೆ ಒಂದು ಹೊಂದಿಕೊಳ್ಳುವಂತಿರಬೇಕು.

### ಓವರ್ ಕೋಟ್

ನಿಮ್ಮ ಪರಿಸರಕ್ಕೆ ಓವರ್‌ಕೋಟ್ ಅಗತ್ಯವಿದೆಯೇ ನೋಡಿ. ಕೆಲವು ಭಾಗಗಳಲ್ಲಿ ಫುಲ್ ಲೆಂತ್ ಓವರ್‌ಕೋಟ್ ಬೇಕಿರುವುದಿಲ್ಲ. ಅಲ್ಲಿ ಸೊಂಟದವರೆಗಿನ ಕೋಟ್ ಧರಿಸಿ. ಒಂದು ವೇಳೆ ಉದ್ದನೆಯ ಓವರ್ ಕೋಟ್ ಬೇಕು ಎನಿಸಿದರೆ ಅದಕ್ಕೆ ಬೆಲ್ಟ್ ಅಥವಾ ಲೇಸ್ ಇರಬೇಕೆ ಬೇಡವೇ ಎನ್ನುವುದೂ ನಿಮ್ಮ ನಿಲುವು ಹಾಗೂ ಆಕಾರವನ್ನು ಅವಲಂಬಿಸಿರುತ್ತದೆ.

ಸೊಂಟದಳತೆ ಸಣ್ಣ ಇರುವವರು ಬೆಲ್ಟ್ ಅಥವಾ ಲೇಸ್ ಇರುವ ಓವರ್‌ಕೋಟ್‌ಗಳನ್ನು ಬಳಸಿದರೆ ಚೆಂದ. ಸೊಂಟದಳತೆ ದಪ್ಪ ಇರುವವರು ಈ ಆಯ್ಕೆಗೆ ಹೋಗದಿರುವುದು ಉತ್ತಮ.

ಅತಿಹೆಚ್ಚು ಚಳಿ ಇರುವ ಪ್ರದೇಶದಲ್ಲಿರುವವರು ರಾತ್ರಿಗೆ ಎಲ್ಲಾದರೂ ಹೊರಗೆ ಹೋಗಬೇಕಾಗಿ ಬಂದಾಗ ಎರಡು ಕೋಟ್‌ಗಳನ್ನು ಹಾಕಿಕೊಳ್ಳಬಹುದು. ಅಥವಾ ಒಂದು ಕೋಟ್ ಒಂದು ಜಾಕೆಟ್ ಧರಿಸಬಹುದು. ಟ್ರ್ಯಾಕ್ ಜಾಕೆಟ್ ಮತ್ತು ಫರ್ ಕೋಟ್ ಜೋಡಿಸುವುದು ಉತ್ತಮ.

ಇಷ್ಟೆಲ್ಲಾ ಆದ ಮೇಲೂ ನಿಮ್ಮ ಕುತ್ತಿಗೆಯ ಸುತ್ತ ಅಂದದ ಸ್ಕಾರ್ಫ್ ಸುತ್ತುವರಿಯದಿದ್ದರೆ ಚಳಿಗಾಲದ ಪರಿಪೂರ್ಣ ಲುಕ್ ಸಿಗದು. ಎರಡು ಬಾರಿ ಸುತ್ತುವಂತಹ ಗಾಢ ಬಣ್ಣದ ಸ್ಕಾರ್ಫ್ ನಿಮ್ಮ ಎಲ್ಲಾ ಉಡುಗೆಗಳೊಂದಿಗೆ ಹೊಂದಿಕೊಳ್ಳುತ್ತದೆ. ಒಂದು ವೇಳೆ ಸ್ಕಾರ್ಫ್ ಬೇಡ ಎಂದರೆ ಕ್ಯಾಪ್ ಹೊಂದಿಸಿಕೊಳ್ಳಬಹುದು.

### ಕಾಲು ಬೆಚ್ಚಗಿರಲಿ

ಕಾಲು ಬೆಚ್ಚಗಿರಲಿ ಮೊಳಕಾಲುವರೆಗಿನ ಸಾಕ್ಸ್ ಆಯ್ದುಕೊಳ್ಳಿ. ನಿಮಗೆ ಬೂಟ್ ಬೇಕೊ, ಸ್ಲಿಪ್ಪರ್ ಅಥವಾ ಸ್ಯಾಂಡಲ್ ಬೇಕೊ ಎನ್ನುವುದು ನಿಮ್ಮ ದಿರಿಸು ಹಾಗೂ ಎತ್ತರವನ್ನು ಅವಲಂಬಿಸಿರುತ್ತದೆ.


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಕೇವಲ 5 ದಿನದಲ್ಲಿ

100% ಪರಿಹಾರ ಶತಸಿದ್ಧ

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು. 9620444460